
## ಸುದ್ದಿ ಸಿಂಚನ

### ಇಂದು ಕೂಡ್ಲಿಗಿ ವಿಸ್ಮಯ ಪುಸ್ತಕ ಲೋಕಾರ್ಪಣೆ

**ಕೂಡ್ಲಿಗಿ:** ಪಟ್ಟಣದ ಜ್ಞಾನಭಾರತಿ ಬಿಇಡಿ ಮಹಾವಿದ್ಯಾಲಯ ಸಭಾಂಗಣದಲ್ಲಿ ಏ. 11ರಂದು ಬೆಳಗ್ಗೆ 10.30ಕ್ಕೆ ಕೂಡ್ಲಿಗಿ ವಿಸ್ಮಯ ಎನ್ನುವ ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಗಜಾಪುರದ ಕಾವ್ಯ ಪ್ರಕಾಶನ ಆಯೋಜಿಸಿದ ಕಾರ್ಯಕ್ರಮವನ್ನು ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಉದ್ಘಾಟಿಸುವರು. ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷ ಕೆ.ಎಂ. ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸ್ಥಳೀಯ ಪತ್ರಕರ್ತ ಬಿ.ನಾಗರಾಜ್ ಕೃತಿ ಲೋಕಾರ್ಪಣೆ ಮಾಡಲಿದ್ದು, ಕೃತಿ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ವೆಂಕಟಗಿರಿ ದಳವಾಯಿ ಮಾತನಾಡಲಿದ್ದಾರೆ ಎಂದು ಕೃತಿಯ ಲೇಖಕ ಭೀಮಣ್ಣ ಗಜಾಪುರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



### ಐಪಿಎಲ್ ಬೆಟ್ಟಿಂಗ್ ಪ್ರಕರಣ ದಾಖಲು

**ಹೊಸಪೇಟೆ:** ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ಕುರಿತು ಜಿಲ್ಲೆಯಲ್ಲಿ ನಾಲ್ಕೈದು ಪ್ರಕರಣ ದಾಖಲಿಸಲಾಗಿದೆ. ಬೆಟ್ಟಿಂಗ್ ದಂಧೆ ಕಡಿವಾಣಕ್ಕೆ ಕ್ರಮ ವಹಿಸಲಾಗಿದೆ. ಬುಕ್ಕಿಗಳ ಮೇಲೆ ನಿಗಾವಹಿಸಲಾಗಿದೆ. ಈಗಾಗಲೇ ಪೊಲೀಸರನ್ನು ಅಲರ್ಟ್ ಮಾಡಲಾಗಿದೆ ಎಂದು ಎಸ್ಪಿ ಶ್ರೀಹರಿಬಾಬು ತಿಳಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅಕ್ರಮ ಅಕ್ಕಿ ಸಾಗಾಟ ಪ್ರಕರಣಗಳ ಮೇಲೂ ನಿಗಾ ವಹಿಸಲಾಗಿದೆ. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲಾಗುತ್ತಿದೆ. ಅಕ್ರಮ ದಂಧೆಗೆ ಕಡಿವಾಣ ಹಾಕಲಾಗುತ್ತಿದೆ ಎಂದರು. ಜಿಲ್ಲೆಯಲ್ಲಿ ವಂಚನೆ ಪ್ರಕರಣಗಳ ತನಿಖೆ ನಡೆಯುತ್ತಿದೆ. ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ. ನಗರದಲ್ಲಿ ಮೂರು ಕೆಜಿ ಚಿನ್ನಾಭರಣ ಕಳ್ಳತನ ಪ್ರಕರಣದಲ್ಲೂ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಮಹಾರಾಷ್ಟ್ರಕ್ಕೆ ವಿಶೇಷ ತಂಡ ಕೂಡ ಕಳುಹಿಸಲಾಗಿತ್ತು. ಪ್ರಮುಖ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಅವರನ್ನು ಬಂಧಿಸಲು ಕ್ರಮವಹಿಸಲಾಗುತ್ತಿದೆ ಎಂದರು.

# ಸಹಾನುಭೂತಿಯ ಧರ್ಮ ಪರಿಚಯಿಸಿದ್ದ ಮಹಾವೀರ

## ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಮೇಯರ್ ನಂದೀಶ್ | 30ನೇ ವಯಸ್ಸಿನಲ್ಲಿ ಐಷಾರಾಮಿ ಜೀವನ ತ್ಯಜಿಸಿದ ನಾಯಕ



ಬಳ್ಳಾರಿ ತೇರುಬೀದಿ ರಸ್ತೆಯ ಶ್ರೀ ಪಾರ್ಶ್ವನಾಥ ಭವನ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಮೇಯರ್ ಮುಲ್ಲಂಗಿ ನಂದೀಶ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಮಹಾವೀರ ಜಯಂತಿ ಕೇವಲ ಧಾರ್ಮಿಕ ಹಬ್ಬವಲ್ಲ. ಬದಲಾಗಿ ಕರುಣೆ, ನೈತಿಕತೆ ಮತ್ತು ಅಹಿಂಸೆಯನ್ನು ಪ್ರತಿಬಿಂಬಿಸುವ ದಿನವಾಗಿದ್ದು, ಸತ್ಯ, ಕ್ಷಮೆ ಮತ್ತು ಭೌತಿಕತೆಯಿಂದ ನಿರ್ಲಿಪ್ತತೆಯ ಮಾರ್ಗವನ್ನು ಅನುಸರಿಸುವ ಮೂಲಕ ಸರಳ ಮತ್ತು ಶಾಂತಿಯುತ ಜೀವನವನ್ನು ನಡೆಸಲು ಕಲಿಸುತ್ತದೆ ಎಂದು ಮೇಯರ್ ಮುಲ್ಲಂಗಿ ನಂದೀಶ್ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವುಗಳ ಸಂಯುಕ್ತಾಶ್ರಯದಲ್ಲಿ ನಗರದ ತೇರುಬೀದಿ ರಸ್ತೆಯ ಶ್ರೀ ಪಾರ್ಶ್ವನಾಥ ಭವನ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಮಹಾವೀರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮಹಾವೀರರು ತಮ್ಮ 30ನೇ ವಯಸ್ಸಿನಲ್ಲಿ ಜ್ಞಾನೋದಯವನ್ನು ಹುಡುಕುತ್ತಾ ತಮ್ಮ ಐಷಾರಾಮಿ ಜೀವನ ತ್ಯಜಿಸಿ 12 ವರ್ಷಗಳ ತೀವ್ರ ಧ್ಯಾನ ಮತ್ತು ತಪಸ್ಸಿನ ನಂತರ, ಅವರು ಕೇವಲ ಜ್ಞಾನ ಪಡೆದು ತಮ್ಮ ಜೀವನದ ಉಳಿದ ಭಾಗವನ್ನು ಅಹಿಂಸೆ, ಸತ್ಯ ಮತ್ತು ಸ್ವಯಂ-ಶಿಸ್ತಿನ ಬೋಧನೆಗಳನ್ನು ಹರಡಲು ಕಳೆದರು ಎಂದು ಮಹಾವೀರರ ಜೀವನದ ಬಗ್ಗೆ ಪರಿಚಯಿಸಿದರು.

ಸಾಧ್ವಜಿ ಶ್ರೀ ಸೂರ್ಯಪ್ರಭ ಶ್ರೀಜಿ ವಿಶೇಷ ಉಪನ್ಯಾಸ ನೀಡಿ, ಜೈನ ಧರ್ಮದ ಇಪ್ಪತ್ತನಾಲ್ಕನೇ ತೀರ್ಥಂಕರರಾದ ಭಗವಾನ್ ಮಹಾವೀರರು ಚಿಕ್ಕ ವಯಸ್ಸಿನಲ್ಲಿಯೇ ಸನ್ಯಾಸ ಸ್ವೀಕರಿಸಿದರು. ಸಹಾನುಭೂತಿಯ ಹೊಸ ಧರ್ಮವನ್ನು ಜಗತ್ತಿಗೆ ಪರಿಚಯಿಸಿದ್ದ ಭಗವಾನ್ ಮಹಾವೀರರು ಅಹಿಂಸೆ, ಪ್ರೀತಿ ಮತ್ತು ತಪಸ್ವಿ ಆಗಿದ್ದರು ಎಂದರು.

ಕಾರ್ಯಕ್ರಮದಲ್ಲಿ ಬಳ್ಳಾರಿ ಕೆ.ಸುಧಾ ತಂಡದವರು ಭಗವಾನ್ ಮಹಾವೀರರ ಕುರಿತ ಭಕ್ತಿ ಗೀತೆಗಳನ್ನು ಪ್ರಸ್ತುತ ಪಡಿಸಿದರು ಮತ್ತು ಜೈನ ಸಮುದಾಯದ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಪ್ರದರ್ಶನ ನಡೆಯಿತು.

ಪಾಲಿಕೆಯ ಸದಸ್ಯ ಗಾದೆಪ್ಪ ಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜೈನ್ ಸಂಘದ ಅಧ್ಯಕ್ಷ ಉತ್ಸವ್ ಲಾಲ್ ಜೀ ವರ್ಗೇಚ ಸೇರಿದಂತೆ ಸಮುದಾಯ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಇತರರಿದ್ದರು.

ಮಹಾವೀರ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆ ನಗರದ ಶ್ರೀ ಪಾರ್ಶ್ವನಾಥ್ ಭವನದಿಂದ ಆರಂಭವಾಗಿ ತೇರು ಬೀದಿ, ಕಾಳಮ್ಮ ಬೀದಿ, ಬೆಂಗಳೂರು ರಸ್ತೆ, ಬ್ರೂಸ್ ಪೇಟೆ ಪೊಲೀಸ್ ಠಾಣೆ ರಸ್ತೆ ಮೂಲಕ ಶ್ರೀ ಪಾರ್ಶ್ವನಾಥ್ ಭವನ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

## ಮಹಾವೀರರ ಅಹಿಂಸೆಯ ಮೂಲ ಮಂತ್ರ ಬೇಕಿದೆ

### ಭಗವಾನ್ ಮಹಾವೀರರ ಜನ್ಮ ಕಲ್ಯಾಣೋತ್ಸವ ಕಾರ್ಯಕ್ರಮದಲ್ಲಿ ರಾಜೇಂದ್ರ ಜೈನ್

• **ಕನ್ನಡಪ್ರಭ ವಾರ್ತೆ** ಕೊಟ್ಟೂರು

ಭಗವಾನ್ ಮಹಾವೀರ ಕೇವಲ ಜೈನ ಸಮುದಾಯಕ್ಕೆ ಮಾತ್ರ ಸೀಮಿತರಲ್ಲ. ಅಹಿಂಸೆ ರಹಿತ ಬದುಕು ಪ್ರತಿಯೊಬ್ಬರನ್ನು ಉನ್ನತ ಮಟ್ಟಕ್ಕೆ ಏರಿಸುತ್ತದೆ ಎಂದು ಬೋಧಿಸಿದ ಮಹಾನ್ ಭಾವರು ಆಗಿದ್ದರು ಎಂದು ವರ್ತಕ ರಾಜೇಂದ್ರ ಜೈನ್ ಹೇಳಿದರು.

ಗುರುವಾರ ಕೊಟ್ಟೂರು ತಾಲೂಕು ಆಡಳಿತ ಕಾರ್ಯಾಲಯದ ಮಹಾತ್ಮಾ ಗಾಂಧಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಭಗವಾನ್ ಮಹಾವೀರರ ಜನ್ಮ ಕಲ್ಯಾಣೋತ್ಸವ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಪ್ರಸ್ತುತ ಜಗತ್ತಿಗೆ ಮಹಾವೀರರ ಅಹಿಂಸೆಯ ಮೂಲ ಮಂತ್ರ ಬೇಕಿದೆ. ಸಕಲ ಜೀವಕ್ಕೆ ಸದಾ ಶಾಂತಿಯನ್ನು ಕೋರಿದ ಮಹಾವೀರರ ಸಂದೇಶವನ್ನು ಪ್ರತಿಯೊಬ್ಬರು ಪಾಲಿಸುವ ಮೂಲಕ ನೆಮ್ಮದಿಯ ಬದುಕನ್ನು ನಡೆಸೋಣ ಎಂದರು. ಗ್ರೇಡ್ 2 ತಹಶೀಲ್ದಾರ್ ಪ್ರತಿಭಾ ಎಂ., ಶ್ವೇತಾಂಬರ ಸಮಾಜದ ಅಧ್ಯಕ್ಷ ಬಾಬುಲಾಲ್ ಜೈನ್ ಮಾತನಾಡಿದರು.



ಭಗವಾನ್ ಮಹಾವೀರರ ಜನ್ಮ ಕಲ್ಯಾಣೋತ್ಸವ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಜೈನ ಸಮಾಜದ ಮುಖಂಡರಾದ ರಾಜೇಂದ್ರ ಕುಮಾರ್ ಜೈನ್, ಶಮೀರು ಮಲ್ಕಿ ಚೂಪ್ರ, ಲಕ್ಷ್ಮೀ ಚನ್ನಪ್ಪ, ಕೊಟ್ರಪ್ಪ ಜೈನರ್, ಸತೀಶ ಜೈನರ್, ರಾಮಚಂದ್ರಪ್ಪ ಜೈನರ್, ಧರಣೇಂದ್ರಪ್ಪ ಜೈನರ್, ದಿಗಂಬರ ಸಮಾಜ ಅಧ್ಯಕ್ಷ ಬ್ರಹ್ಮೇಶ್ ಕುಮಾರ್ ಕಂದಾಯ ಪರಿವೀಕ್ಷಕ ಹಾಲ ಸ್ವಾಮಿ ಗ್ರಾಮ ಆಡಳಿತ ಅಧಿಕಾರಿ ಹರೀಶ್, ಮಂಜುನಾಥ ಹನುಮಂತ ಇದ್ದರು. ಸಿ.ಮ. ಗುರುಬಸವರಾಜ ಸ್ವಾಗತಿಸಿ, ನಿರೂಪಿಸಿದರು.

## ವಿಶ್ವಕ್ಕೆ ಶಾಂತಿ ಸಂದೇಶ ಸಾರಿದ ಭಗವಾನ್ ಮಹಾವೀರ

**ಹೂವಿನಹಡಗಲಿ:** ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಭಗವಾನ್ ಮಹಾವೀರ ಜಯಂತಿ ಆಚರಿಸಲಾಯಿತು. ತಹಸೀಲ್ದಾರ್ ಜಿ.ಸಂತೋಷಕುಮಾರ್ ಭಗವಾನ್ ಮಹಾವೀರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಭಗವಾನ್ ಮಹಾವೀರರು ಇಡೀ ವಿಶ್ವಕ್ಕೆ ಶಾಂತಿ ಸಂದೇಶ ಸಾರುವ ಜತೆಗೆ, ಅಹಿಂಸೆ ತತ್ವ ಸಾರಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಎಲ್ಲರೂ ಮುನ್ನಡೆಯಬೇಕೆಂದು ಹೇಳಿದರು. ಈ ಸಂದರ್ಭ ಕಂದಾಯ ನಿರೀಕ್ಷಕ ಎಂ.ಮನೋಹರ್, ತಾಲೂಕು ಆಡಳಿತದ ಸಿಬ್ಬಂದಿ ಮತ್ತು ಜೈನ ಸಮಾಜದ ಮುಖಂಡರು ಉಪಸ್ಥಿತರಿದ್ದರು. ಪಟ್ಟಣದಲ್ಲಿರುವ ಜೈನ ಬಸದಿಯಲ್ಲಿ ಮಹಾವೀರ ಹಾಗೂ ಪದ್ಮವತಿ ದೇವಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.



ತಾಲೂಕ ಆಡಳಿತದಿಂದ ಭಗವಾನ್ ಮಹಾವೀರರ ಜಯಂತಿ ಆಚರಿಸಲಾಯಿತು.

# ವ್ಯಕ್ತಿ ಬರ್ಬರ ಹತ್ಯೆ: ಕೊಲೆ ಆರೋಪಿಗೆ ಗುಂಡೇಟು

## ಪೊಲೀಸರ ಮೇಲೆ ಹಲ್ಲೆ ನಡೆಸಲು ಯತ್ನಿಸಿದ ಆರೋಪಿ | ಗುಂಡು ಹಾರಿಸಿದ ಪಿಐ ಹುಲುಗಪ್ಪ



ಹೊಸಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರ ಫೈರಿಂಗ್‌ನಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಕೊಲೆ ಆರೋಪಿ ಕಾಳಿಯ ಆರೋಗ್ಯ ವಿಚಾರಿಸಿದ ಎಸ್ಪಿ ಬಿ.ಎಲ್. ಶ್ರೀಹರಿಬಾಬು.

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ನಗರದ ಜಂಬುನಾಥ ರಸ್ತೆಯ ಅಂಬೇಡ್ಕರ್‌ನಗರ ನಾಲ್ಕನೇ ಕ್ರಾಸ್‌ನಲ್ಲಿ ಬುಧವಾರ ರಾತ್ರಿ ಹಳೆ ವೈಷಮ್ಯದ ಹಿನ್ನೆಲೆ ಚಾಕುವಿನಿಂದ ಚುಚ್ಚಿ, ತಲೆ ಮೇಲೆ ಕಲ್ಲು ಎತ್ತಿಹಾಕಿ ವ್ಯಕ್ತಿಯ ಬರ್ಬರ ಹತ್ಯೆ ಮಾಡಲಾಗಿದ್ದು, ಪಂಚನಾಮೆ ವೇಳೆ ಕೊಲೆ ಆರೋಪಿ ಪೊಲೀಸರ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ ವೇಳೆ ಗುಂಡು ಹಾರಿಸಲಾಗಿದೆ.

ನಗರದ ಎಸ್ಪಿ ಕಚೇರಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್ಪಿ ಬಿ.ಎಲ್. ಶ್ರೀಹರಿಬಾಬು ನಗರದ ಅಂಬೇಡ್ಕರ್‌ನಗರದ ನಿವಾಸಿ ಹೊನ್ನೂರ (28) ಕೊಲೆಯಾದ ವ್ಯಕ್ತಿಯಾಗಿದ್ದು, ಕೊಲೆ ಮಾಡಿದ ಆರೋಪದಲ್ಲಿ ಅದೇ ಬಡಾವಣೆಯ ಕಾಳಿ (30) ಎಂಬುವನನ್ನು ಬಂಧಿಸಲಾಗಿದೆ ಎಂದರು.

**ಹಳೇ ವೈಷಮ್ಯ:** 2015ರಲ್ಲಿ ಅನೈತಿಕ ಸಂಬಂಧ ಕೊಲೆ ಪ್ರಕರಣದಲ್ಲಿ ಕಾಳಿಯ ವಿರುದ್ಧ ಹೊನ್ನೂರ ಸಾಕ್ಷಿ ಹೇಳಿದ್ದರು. ಈ ದ್ವೇಷದ ಹಿನ್ನೆಲೆ 2021ರಲ್ಲಿ ಕೂಡ ಹೊನ್ನೂರ ಮೇಲೆ ಕಾಳಿಯಿಂದ ಕೊಲೆಗೆ ಯತ್ನ ನಡೆದಿತ್ತು. ನಂತರದಲ್ಲಿ ಹೊನ್ನೂರ ದಾವಣಗೆರೆಯಲ್ಲಿ ವಾಸವಾಗಿದ್ದರು. ಅಲ್ಲೇ ಜೀವನ ನಡೆಸುತ್ತಿದ್ದರು. ನಗರದ ಹೊರ ವಲಯದ ಜಂಬುನಾಥೇಶ್ವರ ರಥೋತ್ಸವ ಹಿನ್ನೆಲೆ ನಗರಕ್ಕೆ ಆಗಮಿಸಿದ್ದ ಹೊನ್ನೂರನ ಮೇಲೆ ಮತ್ತೆ ಬುಧವಾರ ರಾತ್ರಿ ಆರೋಪಿ ಕಾಳಿ ಚಾಕುವಿನಿಂದ ಚುಚ್ಚಿ, ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾನೆ ಎಂದು ಇಲ್ಲಿನ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

**ಫೈರಿಂಗ್:** ನಗರದಲ್ಲಿ ಬುಧವಾರ ರಾತ್ರಿ ನಡೆದ ಕೊಲೆ ಪ್ರಕರಣದ ಆರೋಪಿ ಕಾಳಿಗೆ ಬುಧವಾರ ಮಧ್ಯರಾತ್ರಿ ಪೊಲೀಸರು ಬಂಧಿಸಿ, ಗುರುವಾರ ಬೆಳಗಿನ ಜಾವ ಪಂಚನಾಮೆ ನಡೆಸಲಾಗಿದೆ. ಚಾಕು ಬಚ್ಚಿಟ್ಟ ಜಾಗ ತೋರಿಸುವೆ ಎಂದು ಕೊಲೆ ಆರೋಪಿ ಕಾಳಿ ತಪ್ಪಿಸಿಕೊಳ್ಳಲು ಪೊಲೀಸರ ಮೇಲೆ ಹಲ್ಲೆ ನಡೆಸಿದ್ದಾನೆ. ಮುಖ್ಯಪೇದೆ ಲಿಂಗರಾಜ ಹಾಗೂ ಪೇದೆ ಕೊಟ್ರೇಶ್‌ಗೆ ಗಾಯಗಳಾಗಿವೆ. ತಮ್ಮ ರಕ್ಷಣೆಗಾಗಿ ಸ್ಥಳದಲ್ಲಿದ್ದ ತನಿಖಾಧಿಕಾರಿ ಪಿಐ ಹುಲುಗಪ್ಪ ಆರೋಪಿ ಬಲಗಾಲಿಗೆ ಫೈರಿಂಗ್ ಮಾಡಿ ಬಂಧಿಸಿದ್ದಾರೆ. ಆರೋಪಿ ಬಲಗಾಲಿಗೆ ಒಂದು ಗುಂಡು ತಗುಲಿದೆ. ಕೊಲೆ ಆರೋಪಿ ಹಾಗೂ ಹಲ್ಲೆಗೊಳಗಾದ ಪೊಲೀಸರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಈ ಪ್ರಕರಣದಲ್ಲಿ ಪೊಲೀಸರು ತಮ್ಮ ರಕ್ಷಣೆಗಾಗಿ ಫೈರಿಂಗ್ ಮಾಡಿದ್ದಾರೆ. ಪಂಚನಾಮೆ ನಡೆಸಲು ಹೋದಾಗ ಈ ಘಟನೆ ನಡೆದಿದೆ ಎಂದರು.

ಈ ಮಧ್ಯೆ ಗಾಯಗೊಂಡಿರುವ ಪೊಲೀಸರಾದ ಲಿಂಗರಾಜ ಮತ್ತು ಕೊಟ್ರೇಶ್ ನೀಡಿದ ದೂರಿನ ಆಧಾರದ ಮೇಲೆ ಗ್ರಾಮೀಣ ಪೊಲೀಸ್ ಠಾಣೆಯಲ್ಲೂ ಆರೋಪಿ ಕಾಳಿ ವಿರುದ್ಧ ಪ್ರಕರಣ ದಾಖಲಾಗಿದೆ. ಕೊಲೆಯಾದ ವ್ಯಕ್ತಿ ದೇಹದ ಮೇಲೆ 21 ಗಾಯಗಳಾಗಿವೆ. ಆರೋಪಿ ಕೊಲೆಗೆ ಮೂರು ಚಾಕು ಬಳಸಿದ್ದ ಎಂದು ಹೇಳಲಾಗುತ್ತಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ತಲೆ ಮೇಲೆ ಸೈಜು ಗಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

# ಸಂಭ್ರಮದ ಶ್ರೀ ಜಂಬುನಾಥೇಶ್ವರ ಸ್ವಾಮಿ ರಥೋತ್ಸವ



ಹೊಸಪೇಟೆ ನಗರದ ಹೊರವಲಯದ ಐತಿಹಾಸಿಕ ಶ್ರೀ ಜಂಬುನಾಥೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ನಿಮಿತ್ತ ಗುರುವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದೊಂದಿಗೆ ರಥೋತ್ಸವ ಜರುಗಿತು.

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ನಗರದ ಹೊರವಲಯದ ಐತಿಹಾಸಿಕ ಶ್ರೀ ಜಂಬುನಾಥೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ನಿಮಿತ್ತ ಗುರುವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದೊಂದಿಗೆ ರಥೋತ್ಸವ ಜರುಗಿತು. ಜಾತ್ರಾ ವೈಭವದಲ್ಲಿ ಭಕ್ತಾದಿಗಳು ಮಿಂದೆದ್ದರು. ರಥೋತ್ಸವದಲ್ಲಿ ಭಕ್ತರು ದೇವಸ್ಥಾನದ ಆವರಣದಲ್ಲಿ ರಥವನ್ನು ಎಳೆದು ಮತ್ತೆ ಮೂಲ ಸ್ಥಾನಕ್ಕೆ ತಂದು ನಿಲ್ಲಿಸಿದರು. ದಾವಣಗೆರೆ, ಕೊಪ್ಪಳ, ಗದಗ, ಹಾವೇರಿ ಸೇರಿದಂತೆ ಬಳ್ಳಾರಿ ಜಿಲ್ಲೆಯ ಕಂಪ್ಲಿ, ಸಿರುಗುಪ್ಪ, ಸಂಡೂರು ವಿಜಯನಗರ ಜಿಲ್ಲೆಯ ಕೂಡ್ಲಿಗಿ, ಹೂವಿನಹಡಗಲಿ, ಕಲ್ಲಹಳ್ಳಿ, ಗಾದಿಗನೂರು, ಸಂಡೂರು ತಾಲೂಕು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ರಥೋತ್ಸವಕ್ಕೆ ಸಾಕ್ಷಿಯಾದರು. ಹರ್ಷೋದ್ಗಾರದೊಂದಿಗೆ ರಥದ ಚಕ್ರಗಳಿಗೆ ತೆಂಗಿನ ಕಾಯಿ ಒಡೆದರು. ಒಂದು ಗಂಟೆ ಕಾಲ ನಡೆದ ಈ ರಥೋತ್ಸವದ ಉದ್ದಕ್ಕೂ ಭಕ್ತರು ಭಕ್ತಿ ಭಾವದೊಂದಿಗೆ ಬಾಳೆಹಣ್ಣು, ಉತ್ತತ್ತಿ ಅರ್ಪಿಸಿದರು.

ಬೆಳಗ್ಗೆಯಿಂದ ಅರ್ಚಕರು ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸಿದರು. ನಂತರ ಪಲ್ಲಕ್ಕಿಯಲ್ಲಿ ಶ್ರೀ ಜಂಬುನಾಥೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ನಂತರ ರಥದ ಧ್ವಜ ಹರಾಜು ಮಾಡಲಾಯಿತು. ವಿಶೇಷವಾಗಿ ಅಲಂಕರಿಸಲಾಗಿದ್ದ ಜಂಬುನಾಥೇಶ್ವರ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಜಾತ್ರೆಗೆ ಚಾಲನೆ ನೀಡಲಾಯಿತು.

### ಅಗ್ನಿ ಅವಘಡ: ಸುಟ್ಟು ಕರಕಲಾದ ಬಾಳೆ, ಅಡಕೆ ಗಿಡ



• **ಕನ್ನಡಪ್ರಭ ವಾರ್ತೆ** ಸಂಡೂರು

ತಾಲೂಕಿನ ವಿಠಲಾಪುರ ಗ್ರಾಮದ ರೈತ ಬಸವನಗೌಡರ ತೋಟದಲ್ಲಿ ಬುಧವಾರ ಆಕಸ್ಮಿಕವಾಗಿ ಉಂಟಾದ ಅಗ್ನಿ ಅವಘಡದಿಂದಾಗಿ 450ರಿಂದ 500 ಅಡಕೆ ಹಾಗೂ 450ರಿಂದ 500 ಬಾಳೆ ಗಿಡಗಳು ಸುಟ್ಟು ಕರಕಲಾಗಿವೆ.

ಅಡಿಕೆ ಗಿಡಗಳನ್ನು ನೆಟ್ಟು ಎರಡು ವರ್ಷವಾಗಿತ್ತು. ಬಾಳೆ ಮತ್ತು ಅಡಿಕೆ ಗಿಡಗಳು ಬೆಂಕಿನ ಕೆನ್ನಾಲಿಗೆಗೆ ಸಿಕ್ಕು ಸುಟ್ಟಿರುವ ಕಾರಣ, ಅಂದಾಜು ₹2.50 ಲಕ್ಷ ನಷ್ಟವಾಗಿದೆ ಎನ್ನಲಾಗಿದೆ.


**IN THE COURT OF THE CIVIL JUDGE & JMFC AT: HAGARIBOMMANAHALLI**
**O.S.No.76/2023**

**BETWEEN:** Smt. Sangamma and others. **...Plaintiffs**
**V/s**
Smt. Basamma and others. **...Defendants**

**To,**
**The defendant No.13 & 16(a):**
**D.13)** Sri. Vammari Ramesha S/o Goneppa, aged about 26 years, Agriculturist, R/o Chilagodu village, H.B. Halli Taluk, Vijayanagara district.
**D.16(a):** Smt. Shanthamma @ Huligemma W/o Late Sanna Durugappa, aged about 54 years, Agriculturist, R/o U P Halli village, H.B. Halli Taluk, Vijayanagara district.

**SUIT SUMMONS TO DEFENDANT No.13 & 16(a)**

Whereas the above named plaintiff No.4 Sri. Hanumanthappa S/o Late Hanumanthappa, aged about 34 years, Agriculturist, R/o Pinjar Hegdal village, in H.B. Halli taluk, Vijayanagara district, has filed the suit against the you as defendants for partition and separate possession in respect of the plaint schedule properties.

Therefore take notice that the above case is posted on 02.06.2025 in the above court and you are directed to appear in person or through your counsel duly instructed on the above date without fail. Failing your appearance on the said date, and time the matter will beheard and determined ex-parte.

Given under my hand and seal of this Hon'ble court on 08-04-2025.

**By order of this court**
**Sd/- Chief Ministerial Officer, Court of Civil Judge & J.M.F.C. Hagaribommanahalli.**
**Sd/- SRI. C. Basappa**
**Advocate, H.B.Halli.** Seal



**ನೈಋತ್ಯ ರೈಲ್ವೆ**

ಟೆಂಡರು ಸೂಚನೆ ಸಂ.: **HE-TRD-2024-25-OT-44**
ದಿನಾಂಕ: **04.04.2025**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
| --- | --- |
| ಹುಬ್ಬಳ್ಳಿ ಟ್ರ್ಯಾಕ್ಷನ್ ಉಪ ಸ್ಟೇಷನ್ ನಲ್ಲಿ 110 ಕೆವಿ / 25 ಕೆವಿ ಹೆಚ್ಚುವರಿ ಟ್ರ್ಯಾಕ್ಷನ್ ಟ್ರಾನ್ಸ್‌ಫಾರ್ಮರ್‌ಗಳ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ. | ರೂ. 1,37,10,110.44 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.05.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ/ಹುಬ್ಬಳ್ಳಿ
PUB/21/AAMO/PRB/SWR/2025-26

South Western Railway - SWR | SWRRLY | SWRRLY



**ನೈಋತ್ಯ ರೈಲ್ವೆ**

ಟೆಂಡರು ಸೂಚನೆ ಸಂ.: **CAO/CN/BNC/EPC/46/2025**
ದಿನಾಂಕ: **09.01.2025** ರ ಮೇಲಿನ ತಿದ್ದುಪಡಿ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
| --- | --- |
| **ತುಮಕೂರು ನಿಲ್ದಾಣದ ಪುನರಾಭಿವೃದ್ಧಿ:** ತುಮಕೂರು ನಿಲ್ದಾಣದಲ್ಲಿ ತುಮಕೂರು ನಿಲ್ದಾಣದ ಪುನರಾಭಿವೃದ್ಧಿಗೆ ಸಂಬಂಧಿಸಿದಂತೆ ಸಿವಿಲ್ ಕಾಮಗಾರಿ, ಸಿಗ್ನಲ್ ಮತ್ತು ದೂರಸಂಪರ್ಕ ಕೆಲಸ ಮತ್ತು ಎಲೆಕ್ಟ್ರಿಕಲ್ ಸಾಮಾನ್ಯ ಕಾಮಗಾರಿಗಳನ್ನು ಒಳಗೊಂಡಂತೆ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ದ ಅನುಬಂಧ.(**ಟೆಂಡರು ಉಲ್ಲೇಖ ಸಂ. TK-STN-DEVELOP-EPC**) | ರೂ. 74,97,63,438/- |

| ಟೆಂಡರು ಮುಚ್ಚುವ ದಿನಾಂಕ | |
| --- | --- |
| ಪ್ರಸ್ತುತ | ಪರಿಷ್ಕೃತ |
| 10.04.2025 (15:00 ಗಂಟೆಗೆ) | **25.04.2025 (15:00 ಗಂಟೆಗೆ)** |

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ಬೆಂಗಳೂರು ದಂಡು
PUB/25/AAMO/PRB/SWR/2025-26

South Western Railway - SWR | SWRRLY | SWRRLY








**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

**2002ರ ಸರ್ಫೇಸಿ ಕಾಯಿದೆಯ ಕಲಂ 13(2)ರಡಿ ಡಿಮಾಂಡ್ ನೋಟಿಸ್**

ಆದಾಗ್ಯೂ, ಕೆಳಕಂಡಂತೆ ತಿಳಿಸಲಾದ ಸಾಲಗಾರರು, ಸಹ-ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರು ಆದ ನೀವು ಜನ ಸ್ಮಾಲ್ ಫೈನಾನ್ ಬ್ಯಾಂಕ್ ಲಿಮಿಟೆಡ್‌ನಿಂದ, ನಿಮ್ಮಗಳ ಸ್ಥಿರ ಆಸ್ತಿಗಳನ್ನು ಅಡಮಾನ ಮಾಡಿ ಸಾಲಗಳನ್ನು ಪಡೆದಿರುತ್ತೀರಿ. ನೀವೆಲ್ಲಾ ಸಾಲ ತೀರಿಸದೇ ವಿಫಲರಾಗಿ ಸುಸ್ತಿಯಾದುದರಿಂದ ನಿಮ್ಮ ಸಾಲದ ಖಾತೆಯನ್ನು ನಿಷ್ಕಾರ್ಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ, ಆದಾಗ್ಯೂ, ಜನ ಸ್ಮಾಲ್ ಫೈನಾನ್ ಬ್ಯಾಂಕ್ ಲಿಮಿಟೆಡ್ ಭದ್ರತಾ ಸಾಲಿಗರಾಗಿ, ಕಾಯಿದೆಯಡಿ ಮತ್ತು ಸದರಿ ಕಾಯಿದೆಯ ಕಲಂ 13(2) ಮತ್ತು 2002ರ ಭದ್ರತಾ ಹಿತಾಸಕ್ತಿ ನಿಯಮಗಳ ನಿಯಮ 2ರ ಜೊತೆಗೆ ಒದಗಿಬಂದ ಅಧಿಕಾರಗಳಂತೆ, ಕೆಳಕಂಡಂತಿರುವ ವಿವರಗಳ ಪಟ್ಟಿಯ ಕಾಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ ಸಹ-ಸಾಲಗಾರರು/ ಜಾಮೀನುದಾರರು/ಅಡಮಾನದಾರರುಗಳಿಗೆ ಡಿಮಾಂಡ್ ನೋಟೀಸ್ ಜಾರಿಮಾಡಿ ನೋಟೀಸ್‌ನಲ್ಲಿ ನಮೂದಿಸಲಾದ ಬಾಕಿ ಸಾಲದ ಮೊಬಲಗು ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತವನ್ನು ಡಿಮಾಂಡ್ ನೋಟೀಸ್‌ನ ದಿನಾಂಕದಿಂದ 60 ದಿನಗೊಳಗಾಗಿ ತೀರಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಕೆಲವು ವಿವಿಧ ಕಾರಣಗಳಿಂದ ನೋಟೀಸ್‌ಗಳ ಸರ್ವ್ ಮಾಡಲಾಗಲಿಲ್ಲ.

| ಕ್ರ. ಸಂ | ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ಅಡಮಾನದಾರರ ಹೆಸರು | ಸಾಲದ ಸಂಖ್ಯೆ ಮತ್ತು ಸಾಲದ ಮೊತ್ತ | ಪರಿಮಾಣಕ್ಕೆ ಒಳಗಾಗುವ ಭದ್ರತಾ ಆಸ್ತಿಯ ವಿವರಣೆ | ಎನ್‌ಪಿಎ ಮತ್ತು ಡಿಮಾಂಡ್ ನೋಟೀಸ್‌ನ ದಿನಾಂಕ | ಬಾಕಿ ಮೊತ್ತ ರೂ./ಗಳಲ್ಲಿ ಕೆಳಕಂಡಂತೆ ಇದ್ದಂತೆ |
| --- | --- | --- | --- | --- | --- |
| 1 | 1) ಶ್ರೀ ಎ ಮೊಹಮ್ಮದ್ ಸಿದ್ದಿಕ್ಯೂ ಅಹ್ಮದ್, 2) ಶ್ರೀಮತಿ ಉಮ್ಮೇ ಆಸ್ಮಾ | Loan Account No. 30319430000255 31989430000980 Loan Amount: Rs. 14,32,214/- Rs. 6,50,000/- | ಅಡಮಾನಿತ ಸ್ಥಿರಾಸ್ತಿ: ಆಸ್ತಿ ಸಂ. 1: ಸಕಲ ಸಮಸ್ತವೂ ಸೇರಿಟ ಸ್ಥಿರಾಸ್ತಿಯ ಕಾರ್ಪೋರೇಷನ್ ವಾರ್ಡ್ ಸಂ. 05, ಸಿಎಂಸಿ ವಾರ್ಡ್ ಸಂ. 06, ಬ್ಲಾಕ್ ಸಂ. 04, ಟಿಎಸ್ ಸಂ. 629/636/31ಎ, ಅಸೆಸ್‌ಮೆಂಟ್ ಸಂ. 9491, ಬ್ರೂಸ್ ಪೆಟ್, ಬಂಡಿಮೋಟು, ಟ್ಯಾಂಕ್‌ಬಂಡ್ ರಸ್ತೆ, ಬಳ್ಳಾರಿ. ಅಳತೆ- ಪೂರ್ವದಿಂದ ಪಶ್ಚಿಮಕ್ಕೆ: 22 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ: 13 ಅಡಿ, ಒಟ್ಟಾರೆ ಅಳತೆ: 286 ಚದರ ಅಡಿ, ನಿರ್ಮಿತ ಪ್ರದೇಶ ಜಿ.ಎಫ್. 286 ಚದರ ಅಡಿ, ಎಫ್‌ಎಫ್ 286 ಚದರ ಅಡಿ, ನೋಂದಣಿ ಜಿಲ್ಲೆ ಬಳ್ಳಾರಿ ಮತ್ತು ಉಪ-ನೋಂದಣಿ- ಬಳ್ಳಾರಿ, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸಣ್ಣ ಸಂಕಣ್ಣ ರವರ ಖಾಲಿ ನಿವೇಶನ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಹಟ್ ಆಫ್ ಕಲ್ಲಮ್ಮ, ದಕ್ಷಿಣಕ್ಕೆ: ಸಣ್ಣ ಸಂಕಣ್ಣ ರವರ ಖಾಲಿ ನಿವೇಶನ. ಆಸ್ತಿ ಸಂ. 2: ಸಕಲ ಸಮಸ್ತವೂ ಸೇರಿಟ ಸ್ಥಿರಾಸ್ತಿಯ ಕಾರ್ಪೋರೇಷನ್ ವಾರ್ಡ್ ಸಂ. 05, ಸಿಎಂಸಿ ವಾರ್ಡ್ ಸಂ. 06, ಬ್ಲಾಕ್ ಸಂ. 04, ಟಿಎಸ್ ಸಂ. 629 ರಿಂದ 636, ಪ್ಲಾಟ್ ಸಂ. 31/ಬಿ, ಅಸೆಸ್‌ಮೆಂಟ್ ಸಂ. 9491, ಬ್ರೂಸ್ ಪೆಟ್, ಬೆಂಗಳೂರು ರಸ್ತೆ, ಬಳ್ಳಾರಿ. ಅಳತೆ- ಪೂರ್ವದಿಂದ ಪಶ್ಚಿಮಕ್ಕೆ: 16 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ: 18 ಅಡಿ, ಒಟ್ಟಾರೆ ಅಳತೆ: 288 ಪಕ್ಕದ ಖಾಲಿ ನಿವೇಶನದ ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 22, ಉತ್ತರದಿಂದ ದಕ್ಷಿಣಕ್ಕೆ: 5 ಅಡಿ, ನಿರ್ಮಿತ ಪ್ರದೇಶ ಜಿ.ಎಫ್. 288 ಚದರ ಅಡಿ, ಎಫ್‌ಎಫ್ 288 ಚದರ ಅಡಿ, ನೋಂದಣಿ ಜಿಲ್ಲೆ ಬಳ್ಳಾರಿ ಮತ್ತು ಉಪ-ನೋಂದಣಿ- ಬಳ್ಳಾರಿ, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಬಸಮ್ಮ ರವರಿಗೆ ಸೇರಿದ ಪ್ಲಾಟ್ ಸಂ. 30, ಪಶ್ಚಿಮಕ್ಕೆ: ಪ್ಲಾಟ್ ಸಂ. 31/ಎ ಮತ್ತು ಟ್ಯಾಂಕ್ ಬಂಡ್ ರಸ್ತೆ, , ಉತ್ತರಕ್ಕೆ: ಕೆ. ಬಾಬು ರವರಿಗೆ ಸೇರಿದ ಪ್ಲಾಟ್ ಸಂ. 32 ಮತ್ತು ಪ್ಲಾಟ್ ಸಂ. 31ಎ, ದಕ್ಷಿಣಕ್ಕೆ: ರಸ್ತೆ. | Date of NPA: 03-04-2025 Demand Notice Date: 09-04-2025 | ರೂ. 19,37,770.60 (ಹತ್ತೊಂಭತ್ತು ಲಕ್ಷದ ಮೂವತ್ತೇಳು ಸಾವಿರದ ಏಳುನೂರ ಎಪ್ಪತ್ತು ರೂ. ಮತ್ತು ಅರವತ್ತು ಪೈಸೆ ಮಾತ್ರ) ಬಾಕಿ 07-04-2025 ರಂದು ಇದ್ದಂತೆ |

ಆದುದುರಿಂದ ಕಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರರು ಮತ್ತು ಅಡಮಾನದಾರರುಗಳಿಗೆ ಸೂಚನೆ ನೀಡಿ ಕರೆ ನೀಡುವುದೇನೆಂದರೇ ಸಂಬಂಧಿಸಿದ ಸಾಲಗಾರರು/ಸಹಸಾಲಗಾರರ ಕಲಂ 6ರ ಎದುರಾಗಿ ಸೂಚಿಸಲಾದ ದಿನಾಂಕದಂದು ಬಾಕಿ ಇದ್ದಂತೆ ಮತ್ತು ಪಾವತಿಸಬೇಕೆಂಬುದಾಗಿ ಕಂಡು ಬಂದ ಕಲಂ 6ರಲ್ಲಿ ತೋರಿಸಿದಂತೆ ಬಾಕಿ ಮೊತ್ತವನ್ನು ಸೂಚನೆ ಪ್ರಕಟಿಸಿದ 60 ದಿನಗಳ ಒಳಗಾಗಿ ಪಾವತಿ ಮಾಡಲೇಬೇಕು. ಒಟ್ಟಾರೆ ಮೊತ್ತ ಜೊತೆಗೆ ತದನಂತರದ ಬಡ್ಡಿ ಮತ್ತು ಪಾವತಿಯಾಗುವ ದಿನಾಂಕದವರೆಗೆ ಪಾವತಿಸಬೇಕಾದ ಇತರೆಗಳನ್ನು ಸೇರಿದ ಬಾಕಿ ಸಾಲದ ಮೊತ್ತ ಪಾವತಿಯಾಗದೇ ಇದ್ದ ಪಕ್ಷದಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಆದ ನಾವು ಕಲಂ 4ರಲ್ಲಿ ತೋರಿಸಲಾದ ಆಸ್ತಿಗಳ ಮೇಲೆ ಭದ್ರತಾ ಹಿತಾಸಕ್ತಿಯನ್ನು ಜಾರಿ ಮಾಡುವ ಸಮಂಜಸ ಕ್ರಮ ಕೈಗೊಳ್ಳಲಾಗುವುದು ಅನಿವಾರ್ಯವಾಗುತ್ತದೆ. ಸದರಿ ಫೈನಾನ್ಸಿಯಲ್‌ನ ಸಾಲಗಾರರ/ಸಹ-ಸಾಲಗಾರರ/ ಜಾಮೀನುದಾರರ/ಅಡಮಾನದಾರರ ವಿರುದ್ಧ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಗೆ ಲಭ್ಯವಾಗುವ ಅಂತಹ ಹಕ್ಕುಗಳು ಮತ್ತು ಪರಿಹಾರಗಳ ಬಗ್ಗೆ ಪೂರ್ವಾಗ್ರಹವಿಲ್ಲದೇ ಈ ನೋಟೀಸನ್ನು ಹೊರಡಿಸಲಾಗಿದೆ. ನಿಮಗೆ ನೀಡುವ ಎಚ್ಚರಿಕೆಯೇನೆಂದರೇ ಸದರಿ ಕಾಯಿದೆಯ ಕಲಂ 13(13)ರನ್ವಯ ನೀವು ಮೇಲಿನ ಭದ್ರತೆಯ ಬಗ್ಗೆ ಯಾವುದೇ ವ್ಯವಹಾರ ಮಾಡದಂತೆ/ ಭದ್ರತೆಯನ್ನು ವಿಲೇವಾರಿ ಮಾಡದಂತೆ ಅಥವಾ ಭದ್ರತಾ ಆಸ್ತಿಯನ್ನು ಭದ್ರತಾ ಸಾಲಿಗರ (ಸೆಕ್ಯೂರ್ಡ್ ಕ್ರೆಡಿಟರ್) ಪೂರ್ವಾನುಮತಿಯಿಲ್ಲದೇ ಮಾರಾಟ ಮಾಡದಂತೆ ಅಥವಾ ವರ್ಗಾಯಿಸದಂತೆ ಅಥವಾ ಇತರೆ ರೀತಿಯಲ್ಲಿ ಏನೂ ಮಾಡದಂತೆ ಪ್ರತಿಬಂಧಿಸಲಾಗಿದೆ.

**ದಿನಾಂಕ: 11.04.2025, ಸ್ಥಳ: ಬಳ್ಳಾರಿ** **ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ**



**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

**ಇ-ಹರಾಜು ಸೂಚನೆ**

**2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟಿಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ**

ಆದಾಗ್ಯೂ, ಜನ ಸ್ಮಾಲ್ ಫೈನಾನ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

| ಕ್ರ. ಸಂ. | ಸಾಲದ ಖಾತಾ ಸಂಖ್ಯೆ | ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು | 13-2 ನೋಟೀಸ್ ದಿನಾಂಕ | ಸ್ವಾಧೀನತೆಯ ದಿನಾಂಕ | ಪ್ರಸ್ತುತ ಬಾಕಿ ಮೊತ್ತ ದಿನಾಂಕ 08.04.2025 ರಂದು ಇದ್ದಂತೆ | ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ | ಮೀಸಲು ಬೆಲೆ ಐಎನ್‌ಆರ್ | ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್ | ಇ-ಹರಾಜಿನ ದಿನಾಂಕ ಮತ್ತು ಸಮಯ | ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ |
| --- | --- | --- | --- | --- | --- | --- | --- | --- | --- | --- |
| 1 | 31989630002171 | 1) ಶ್ರೀ ಮಹಬೂಬ್ 2) ಹಸೀನಾ | 07.11.2024 | 12.02.2025 | ರೂ. 3,42,243/- (ಮೂರು ಲಕ್ಷದ ನಲವತ್ತೆರಡು ಸಾವಿರದ ಇನ್ನೂರ ನಲವತ್ತಮೂರು ರೂ.ಗಳು ಮಾತ್ರ) | 23.04.2025 Time: 09:30 AM to 05:00 PM | ರೂ.6,50,000/- (ಆರು ಲಕ್ಷದ ಐವತ್ತು ಸಾವಿರ ರೂ.ಗಳು ಮಾತ್ರ) | ರೂ. 65,000/- (ಅರವತ್ತೈದು ಸಾವಿರ ರೂ.ಗಳು ಮಾತ್ರ) | 29.04.2025 @ 02:00 PM | 28.04.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071. |
| | ಭದ್ರತಾ ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಕಾರ್ಪೋರೇಷನ್ ವಾರ್ಡ್ ಸಂ.30, ಸರ್ವೆ ಸಂ. 596/ಸಿ, ಅಸೆಸ್‌ಮೆಂಟ್ ಸಂ.43856/243, ಬೆಳಗಲ್ಲು ಕ್ರಾಸ್, ಗೌತಮ್ಮ ನಗರ ಅಳತೆ ಪೂರ್ವ-ಪಶ್ಚಿಮ ಅಳತೆ: 25 ಅಡಿ, ಉತ್ತರ-ದಕ್ಷಿಣ: 35 ಅಡಿ, ಒಟ್ಟು ಅಳತೆ 875 ಚ.ಡಿ., ನಿರ್ಮಿತ ಪ್ರದೇಶ 450 ಚ.ಅ. ನೋಂದಣಿ ಜಿಲ್ಲೆ ಮತ್ತು ಬಳ್ಳಾರಿಯ ಉಪ ನೋಂದಣಿ ಚಕ್ಕುಬಂದಿ: ಪೂರ್ವಕ್ಕೆ: ಹಸೀನಾ, ಪಶ್ಚಿಮಕ್ಕೆ: ಹರ್ಷ, ಉತ್ತರಕ್ಕೆ: ಚಿರಂಜೀವಿ, ದಕ್ಷಿಣ: ರಸ್ತೆ. | | | | | | | | | |

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ॥-4 ಕ್ಲೋಸರ್ ಮೂಲಕ **https://bankauctions.in & www.foreclosureindia.com.** ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ॥-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. **8142000809. Email id: info@bankauctions.in / srinivas@bankauctions.in.** ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ, ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

**ದಿನಾಂಕ: 11.04.2025, ಸ್ಥಳ: ಬಳ್ಳಾರಿ** **ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**